> ಅವನನ್ನು ಕಂಡಾಕ್ಷಣ ಅವಳ ಮುಖ ಅರಳಿತು. ಅವಳು ಇನ್ನೇನು ಹತ್ತಿರಕ್ಕೆ ಬಂದೇಬಿಟ್ಟಳೆಂದು ಹೆದರಿ ಆತ ಕಣ್ಣು ಮಿಟುಕಿಸಿ ಸೂಚಿಸಿದ. ಹಗಲಲ್ಲವೇ? ಯಾರಾದರೂ ನೋಡಿದರೆ ಕೆಡುಕಲ್ಲವೆ? ಆತ ಹಾಗೆಯೇ ಕುಳಿತ.

ಬಾಯಿಯಲ್ಲಿ ನೀರಪಸೆಯಿಲ್ಲ. ರಕ್ತವೆಲ್ಲ ಬತ್ತಿಹೋಗಿ ಬಿಳಿಚಿಕೊಂಡ ಹಾಗಾಗಿದೆ. ಆತ ಬೆಂಚಿನಲ್ಲಿ ಕುಳಿತ. ಮೈದಾನದಲ್ಲಿ ದೂರ ಕಾಕಿ ಟ್ರೌಸರ್ ತೊಟ್ಟ ಹುಡುಗರು ಕ್ರಿಕೆಟ್ ಆಡುತ್ತಿದ್ದಾರೆ. ಹತ್ತಿರ ಹತ್ತಿರದ ಬೆಂಚುಗಳಲ್ಲಿ ಹೆಂಗಸರು ಗಂಡಸರು. ಹೆಚ್ಚಿನವರೂ ಗಂಡಸರೇ. ಅವನಿಗೆ ತೀವ್ರವಾದ ಅಸೂಯೆಯೂ ದುಃಖವೂ ಆಯಿತು. ಬೇರೆ ಯಾರೂ ಅವಳನ್ನು ನೋಡಬಾರದು! ಏನು ಮಾಡಲಿ? ನೊಂದ ಹೃದಯದ ಪ್ರಾರ್ಥನೆ ಮಾತ್ರ. ಬೇರೆ ಯಾರೂ ಆ ಅದ್ಭುತವನ್ನು ನೋಡದಿರಲಿ. ಹಿಂದೆ ಮುಂದೆ ನೋಡಿ ಅವನು ಮತ್ತೆ ಎದ್ದು ನಿಂತ.

ಅವಳಿನ್ನೂ ಅಲ್ಲಿಯೇ ಇದ್ದಾಳೆ!

ಇನ್ನೇನು ಅವನ ಹೃದಯ ಸಿಡಿದೇಬಿಡುತ್ತದೆ. ಯಾಕೆ ಹೀಗೆ? ನೂರಾರು ಹೆಣ್ಣುಗಳನ್ನು ದಿನಾಲೂ ನೋಡುವುದಿಲ್ಲವೇ? ಅವಳಿಗೆ ಮಾತ್ರ ಏನು ಒಂದು ವಿಶೇಷ? ಓ, ಹೆಣ್ಣು ಎಂದು ಹೇಳುವ ಆ ಭಾವನೆಯನ್ನು ಗಂಡು ಎಂದು ಹೇಳುವ ಈ ಭಾವನೆ ಏಕೆ ಹೀಗೆ ಕೊನೆಯಿಲ್ಲದ ಆಸೆಯಿಂದ ನೋಡುತ್ತಿದೆ?

ಅದರಲ್ಲೇನೋ ದಿವ್ಯತ್ವವಿದೆ. ಪ್ರೇಮವೆಂದು ಹೇಳುವ ಮೊಗ್ಗು ಬಿರಿದು ಕಾಯಿಯಾಗುವುದಲ್ಲವೇ ಕಾಮ? ಹೆಣ್ಣು ಈ ಭೂಮಿಯಾಗಿರಬಹುದು. ಪುರುಷ ವೀರ್ಯವೆಂಬುದು ಬೀಜ! ಓ! ಆಲೋಚನೆಗಳೊಂದೂ ಸ್ಫುಟವಾಗಿಲ್ಲ. ಅವನು ಬಳಲಿದ. ಒಂದೇ ಒಂದು ಆಲೋಚನೆ ಮಾತ್ರ. ಅದರಲ್ಲಿ ಏಕಾಗ್ರತೆಯೂ ಇದೆ.

ಹಾಗೆ ಅಂದಿನ ಸೂರ್ಯ ಅಸ್ತಮಿಸಿದ – ದೀಪಗಳೆಲ್ಲೆಡೆ ಉರಿದುವು. ದಾರಿಬದಿಯಲ್ಲಿ ಅವಳು ನಿಂತಿದ್ದಾಳೆ.

ಅವನು ಬೇಯುತ್ತಿದ್ದಾನೆ. ಉಳಿದವರೆಲ್ಲ ಹೊರಟರು. ಆತ ಏಕಾಂಗಿಯಾದ.

ಅವಳು ಹತ್ತಿರಕ್ಕೆ ಬಂದಳು.

ಹಾಗಿದ್ದು ಅವಳನ್ನು ಬಿಗಿದಪ್ಪಿಹಿಡಿದು ಚುಂಬಿಸಿದರೋ? ಬಂದೊಡನೆಯೇ ದೀನಳಾಗಿ ಕೇಳಿದಳು.

'ಒಂದೈದು ಕಾಸು ಕೊಡುತ್ತೀರಾ?'

ಐದು ಕಾಸು... ಹೋ! ಅವಳ ಬೆಲೆ ಇಷ್ಟೂ ಇಳಿದು ಹೋಯಿತು! ಕೂಡದು, ಬೆಲೆಯನ್ನು ಅಷ್ಟು ಕಡಿಮೆ ಮಾಡಕೂಡದು. ಅವನು ಜೇಬಿನಿಂದ ಪರ್ಸ್ ತೆಗೆದ. ಅದರಿಂದ ಒಂದು ರೂಪಾಯಿ ತೆಗೆದು ಅವಳಿಗೆ ಕೊಟ್ಟ ಬಳಿಕ ಮೆಲ್ಲಗೆ ಹೇಳಿದ. 'ಚಿಲ್ಲರೆಯಿಲ್ಲ.'

ಅವಳು ಕೇಳಿದಳು.

'ನಾನು ಮಾಡಿಕೊಂಡು ಬರಲೆ?'

ಅವನು ಹೇಳಿದ.

'ಬೇಡ.'